# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

OFFICE OF THE DEPUTY TAHASILDAR, THAMBRAHALLI-583224

ಎ.ವಿಲೇ.ನಂ.ಕಂ.ಪಹಣಿ.ವಿವಾದ/09/2015 16 ದಿನಾಂಕ:04.10.2016

## -: ತಿದ್ದುಪಡಿ ಆದೇಶ :-

| ವಾದಿ (ಶ್ರೀ/ಶ್ರೀಮತಿ) | ಪ್ರತಿವಾದಿ (ಶ್ರೀ/ಶ್ರೀಮತಿ) |
| --- | --- |
| ಮುಗುಲಿ ಮಂಜುನಾಥ ತಂದೆ ಹುಚ್ಚಪ್ಪ ನಾರಾಯಣದೇವಕೆರೆ ಗ್ರಾಮ ಹಬೊಹಳ್ಳಿ ತಾಲೂಕು | ಕಂದಾಯ ನಿರೀಕ್ಷಕರು ತಂಬ್ರಹಳ್ಳಿ |

*****

ಈ ನ್ಯಾಯಾಲಯದ ಆದೇಶ ಸಂಖ್ಯೆ ಎ.ವಿಲೇ.ನಂ.ಕಂ.ಪಹಣಿ.ವಿವಾದ/09/2015-16 ದಿನಾಂಕ:19.05.2016 ರ ಆದೇಶವನ್ನು ಘೋಷಿಸಿದ್ದು, ಸದರಿ ಆದೇಶದಲ್ಲಿ ವ್ಯಾಜ್ಯದ ಜಮೀನಿನ ಗ್ರಾಮದ ಹೆಸರು ನಾರಾಯಣದೇವರಕೆರೆ ಎಂದು ತಪ್ಪಾಗಿ ನಮೂದಾಗಿದ್ದು ಇದನ್ನು **ಬಲ್ಲಾಹುಣ್ಸೆ ಗ್ರಾಮ** ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳಲು ಆದೇಶಿಸಿದೆ.

04/10

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ತಂಬ್ರಹಳ್ಳಿ

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕುಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

5/10/16

ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

OFFICE OF THE DEPUTY TAHASILDAR, THAMBRAHALLI-583224

ಎ.ವಿಲೇ.ನಂ.ಕಂ.ಪಹಣಿ.ವಿವಾದ/09/2015 16 ದಿನಾಂಕ: 19 .05.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

| ವಾದಿ (ಶ್ರೀ/ಶ್ರೀಮತಿ) | ಪ್ರತಿವಾದಿ (ಶ್ರೀ/ಶ್ರೀಮತಿ) |
|---|---|
| ಮುಗುಲಿ ಮಂಜುನಾಥ ತಂದೆ ಹುಚ್ಚಪ್ಪ ನಾರಾಯಣದೇವರಕೆರೆ ಗ್ರಾಮ ಹಬೊಹಳ್ಳಿ ತಾಲೂಕು | ಕಂದಾಯ ನಿರೀಕ್ಷಕರು ತಂಬ್ರಹಳ್ಳಿ |

ವ್ಯಾಜ್ಯದ ಜಮೀನಿನ ವಿವರ

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ನಾರಾಯಣದೇವರಕೆರೆ | 185/ಬಿ/1ಇ4 | 3.50 ಎಕರೆ |

*****

ಪೀಠಿಕೆ:

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ನಾರಾಯಣದೇವರಕೆರೆ ಗ್ರಾಮದ ಸ.ನಂ. 185/ಬಿ/1ಇ4 ವಿಸ್ತೀರ್ಣ 3.50 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕ್ರಯ ದಸ್ತಾವೇಜು ಪತ್ರದ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್:9/2014-15 ರಲ್ಲಿ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:08.10.2015 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಮನವಿ ಮೇರೆಗೆ ವ್ಯಾಜ್ಯದ ಜಮೀನು ಮೂಲತಃ ಜಾಲಗಾರ ಮಾರುತಿ ತಾಯಿ ಸೋಮವ್ವ ಇವರ ಜಮೀನಾಗಿದ್ದು ಸದರಿಯವರು ದಿನಾಂಕ: 13.03.2015 ರಂದು ನೊಂದಣಿ ಕ್ರಯ ದಸ್ತಾವೇಜು ಸಂಖ್ಯೆ 43333/2015-16ರ ಮೂಲಕ ವಾದಿಗಳು ಕ್ರಯಕ್ಕೆ ಪಡೆದಿದ್ದು ಸದರಿ ನೊಂದಣಿ ಕ್ರಯ ಪತ್ರದ ಪ್ರಕಾರ ಕ್ರಯದಾರರಾದ ವಾದಿಗಳ ಹೆಸರಿಗೆ ಖಾತೆ ಮಾಡಿಕೊಡುವಂತೆ ಕೋರಿರುತ್ತಾರೆ.

ವಾದಿಗಳು ವಿಚಾರಣಾ ನೋಟೀಸ್ ಜಾರಿಯಾಗಿದ್ದರೂ ವಿಚಾರಣೆಗೆ ಸತತವಾಗಿ ಗೈರು ಹಾಜರಗಿರುತ್ತಾರೆ ಕಾರಣ ಕಡತದಲ್ಲಿನ ದಾಖಲೆ ಹಾಗೂ ಕಂದಾಯ ನಿರೀಕ್ಷಕರ ವರದಿಯನ್ನಾಧರಿಸಿ ಆದೇಶಿಸಲು ತೀರ್ಮಾನಿಸಲಾಯಿತು.

ಪ್ರಸ್ತುತ ಹಕ್ಕುಬದಲಾವಣೆ ಸಂಬಂಧ ಗ್ರಾಮದಲ್ಲಿ ನಮೂನೆ 21 ರ ನೋಟೀಸ್ ಜಾರಿ ಮಾಡಲಾಗಿ ಹಾಲಿ ವ್ಯಾಜ್ಯದ ಜಮೀನಿನ ಕ್ರಯದಾರರು ಪ್ರಸ್ತುತ ಜಮೀನಿನಲ್ಲಿ ಭೂ ಪರಿವರ್ತನೆ ಮಾಡಿಕೊಳ್ಳದೇ ಕಾನೂನು ಬಾಹೀರವಾಗಿ ಪ್ಲಾಟ್‌ಗಳನ್ನು ಮಾಡಿ ಮಾರಾಟ ಮಾಡುತ್ತಿರುವುದರಿಂದ ಮಾನ್ಯ ಸಹಾಯಕ ಆಯಕ್ತರು ಹೊಸಪೇಟೆ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಬಹುದೆಂದು ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ರವರು ವರದಿ ಮಾಡಿರುತ್ತಾರೆ ಹಾಗೂ ಪ್ರಸ್ತುತ ಹಕ್ಕುಬದಲಾವಣೆಗಾಗಿ

ಡಯಾಗ್ಲಾಟ್ ಪ್ರತಿ, ಆದಾಯ, ಕ್ರಯದಾರರು ಕೃಷಿಕುಟುಂಬ ಸದಸ್ಯರು ಎಂಬ ಬಗ್ಗೆ ಹಾಗೂ ಇತರೆ ಅವಶ್ಯ ದಾಖಲೆಗಳು ಅವಶ್ಯಕವಾಗಿ ಬೇಕಾಗಿರುವುದರಿಂದ ವಾದಿಗಳ ಸತತ ಗೈರು ಹಾಜರಾತಿಯಿಂದಾಗಿ ಪ್ರಸ್ತುತ ಪ್ರಕರಣದಲ್ಲಿ ಅಂತಿಮ ತೀರ್ಮಾನವು ಗೊಂದಲವಿರುವುದಿಂದ ವಾದಿಗಳಿಗೆ ಉನ್ನತ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ ಆದೇಶ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ನಾರಾಯಣದೇವರಕೆರೆ ಗ್ರಾಮದ ಸ.ನಂ. 185/ಬಿ/1ಇ4 ವಿಸ್ತೀರ್ಣ 3.50 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ವಾದಿಗಳು ಉನ್ನತ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿ ಪ್ರಸ್ತುತ ಪ್ರಕರಣವನ್ನು ಈ ಹಂತದಲ್ಲಿ ಮುಕ್ತಾಯಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 19 .05.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

19/05

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

10/8/16